# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 498/2025

**ಚಾಸಾ-9 ಪ್ರಾಸಾ-8**

| | | |
|---|---|---|
| ಹೆಸರು | – | ಸುನಿಲ್ ಕುಮಾರ್ |
| ತಂದೆಯ ಹೆಸರು | – | ಈಶ್ವರಪ್ಪ |
| ವಯಸ್ಸು | – | 38 ವರ್ಷ |
| ವೃತ್ತಿ | – | ಎ.ಇ.ಇ ಪಿಡಬ್ಲೂಡಿ. |
| ವಾಸಸ್ಥಳ | – | ಹೊಸನಗರ. |

(ದಿನಾಂಕಃ **23.07.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ನಾನು ದಿನಾಂಕಃ 01.08.2024 ರಿಂದ ಇಲ್ಲಿಯವರೆಗೆ ಎ.ಇ.ಇ ಆಗಿ ಹೊಸನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 12.12.2024 ರಂದು ಹೊಸನಗರ ಪೊಲೀಸ್ ಠಾಣೆಯಿಂದ ಸಿಆರ್ ನಂಬರ್ 74/2023 ರಲ್ಲಿ ಮರಳನ್ನು ತೆಗೆಯಲು ಯಾವುದಾದರೂ ಪ್ರದೇಶವನ್ನು ಮರಳು ತೆಗೆಯಲು ಪಾಯಿಂಟ್ ಮಾಡಿ ಗುರುತಿಸಿದ ಬಗ್ಗೆ ಮಾಹಿತಿಯನ್ನು ಕೋರಿ ನಿವೇದನೆಯನ್ನು ಸಲ್ಲಿಸಿದು ಸದರಿ ನಿವೇದನೆಯನ್ನು ಪಡೆದುಕೊಂಡು ದಿನಾಂಕಃ 12.12.2024 ರಂದು ನಾವು ಕೆ.ಎ 29 9831 ಟಿಪ್ಪರ್ ಲಾರಿಗೆ ಯಾವುದೇ ಮರಳನ್ನು ತುಂಬಲು ಅನುಮತಿಯನ್ನು ಕೊಟ್ಟಿರುವುದಿಲ್ಲ ಎಂದು ನನ್ನ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ12 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ12(ಎ) ಎಂದು ಗುರುತಿಸ್ಪಟ್ಟಿರುತ್ತದೆ.

3. ದಿನಾಂಕಃ 15.12.2024 ರಂದು ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮರಳನ್ನು ನಮ್ಮ ಸರ್ಕಾರಿ ಕಾಮಗಾರಿಗೆ ಬಳಸಿಕೊಳ್ಳಲು ಗುತ್ತಿಗೆದಾರರಿಗೆ ವಿಲೇವಾರಿ ಮಾಡಿ ಅವರಿಂದ ರಾಜಸ್ವ ಸಂದಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಪಡೆದುಕೊಂಡು ರಶೀಧಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ನಿಪಿ14 ಎಂದು, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ14(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಎಂ.ಎಲ್ ರವರು ಶ್ರೀ ವೈ.ಪಿ.ಎಂ ರವರ ಪರವಾಗಿ ಆರೋಪಿಗಳ ಸಮ್ಮತಿಯೊಂದಿಗೆ</u>**

1. ದಿನಾಂಕಃ 03.12.2024 ರಂದು ನನಗೆ ಲಿಖಿತವಾಗಿ ನೋಟಿಸ್ ಜಾರಿ ಮಾಡಿರುತ್ತಾರೆ. ಸಾಮಾನ್ಯವಾಗಿ ಮರಳನ್ನು ನಿರ್ದಿಷ್ಟವಾದ ಸ್ಥಳದಿಂದ ತೆಗೆದುಕೊಂಡು ಹೋಗಲು ಭೂ ಮತ್ತು ಗಣಿ ಅಧಿಕಾರಿ ರವರು ಅನುಮತಿ ಕೊಡುತ್ತಾರೆ ಎಂದರೆ ಸರಿ.

2. ನಮ್ಮ ಇಲಾಖೆಯಿಂದ ಸದರಿ ಮರಳು ಇರುವ ಸ್ಥಳವನ್ನು ಗುರುತಿಸಿರುವುದಿಲ್ಲ ಎಂದರೆ ಸರಿ. ಆದ್ದರಿಂದ ಸದರಿ ಸ್ಥಳದ ಬಗ್ಗೆ ನಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನಗೆ ಪೊಲಿಸರು ಕೊಟ್ಟಿರುವ ವರದಿಯಲ್ಲಿ ಮುಂಬಾರು ಹೊಳೆ ಇರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಸರಿ.

3. ನಾನು ದಾಖಲೆಯನ್ನು ಪರಿಶೀಲಿಸಿ ನಮ್ಮ ಇಲಾಖೆಯಿಂದ ಆರೋಪಿಗಳಿಗೆ ಯಾವುದೇ ದಾಖಲೆಯನ್ನು ಕೊಡದೇ ಇರುವುದರಿಂದ ಅನುಮತಿ ಕೊಟ್ಟಿರುವುದಿಲ್ಲ ಎಂದು ನೀಡಿರುತ್ತೇನೆ.

4. ಮರಳನ್ನು ಕ್ಯೂಬಿಕ್ ಮತ್ತು ಟನೇಜ್ ಆಧಾರದ ಮೇಲೆ ಅಳೆಯುತ್ತಾರೆ ಎಂದರೆ ಸರಿ. ನನಗೆ ಪೊಲಿಸರು ಸಲ್ಲಿಸಿರುವ ವರದಿಯಲ್ಲಿ ಮರಳಿನ ತೂಕ ಕ್ಯೂಬಿಕ್ ಅಥವಾ ಟನೇಜ್ ಅಳತೆಯಲ್ಲಿ ಇರುವುದಿಲ್ಲ ಎಂದರೆ ಸರಿ.

5. ನಾನು ಪಿರ್ಯಾದುದಾರರಿಗೆ ಸಹಾಯ ಮಾಡಲು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ</u>**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.